ಹೂಡುವುದರೊಂದಿಗೆ ಕರ್ನಾಟಕ ಪಲ್ಪ್‌ವುಡ್ ಕಂಪನಿಯೆಂಬ ಜಂಟಿ ಕ್ಷೇತ್ರದ ಉದ್ಯಮವೊಂದನ್ನು ಪ್ರಾರಂಭಿಸಲಾಗಿತ್ತು.

1995-99ರ ವರೆಗೆ ನಿಗಮಗಳ ಆದಾಯ:ಖರ್ಚುಗಳ ವಿವರ ಈ ಕೆಳಕಂಡಂತೆ ಇವೆ.

ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ (ರೂ.ಕೋಟಿಗಳಲ್ಲಿ)			ಕರ್ನಾಟಕ ಪಲ್ಪ್‌ವುಡ್ ನಿಯಮಿತ(ರೂ.ಲಕ್ಷಗಳಲ್ಲಿ)		
	ಆದಾಯ	ಖರ್ಚು		ಆದಾಯ	ಖರ್ಚು
1995-96	23.33	18.12	1995-96	91.26	538.48
1996-97	21.07	19.54	1996-97	9.46	339.62
1197-98	18.45	18.22	1997-98	9.84	326.92
1998-99	16.25	15.63	1998-99	2.01	470.15

ಸೂಳ್ಯ ಕ್ಷೇತ್ರದ ವತಿಯಿಂದ ಅರಣ್ಯ ಅಭಿವೃದ್ಧಿ ನಿಗಮದ ಆದಾಯ.

1664 (2312) ಶ್ರೀ ಅಂಗಾರ ಎಸ್ (ಸೂಳ್ಯ): ಮಾನ್ಯ ಅರಣ್ಯ ಪರಿಸರ ಮತ್ತು ಜೀವಿ ಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) 1995-99 ಸೂಳ್ಯ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಗೆ ಬರುವ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತದಿಂದ ಬಂದ ಆದಾಯವೆಷ್ಟು; ಯಾವ ಯಾವ ಮೂಲದಿಂದ ಬಂದಿರುತ್ತದೆ, (ವಿವರ ಒದಗಿಸುವುದು);

ಆ) 1995-99ರ ವರೆಗೆ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ, ಸೂಳ್ಯ ಇದರ ವ್ಯಾಪ್ತಿಗೆ ಬರುವ ಘಟಕಗಳಲ್ಲಿ ತಗಲುವ ಖರ್ಚು ಎಷ್ಟು ? (ಪೂರ್ತಿ ವಿವರ ನೀಡುವುದು)

ಶ್ರೀ ಕೆ.ಎಚ್.ರಂಗನಾಥ್ (ಅರಣ್ಯ ಪರಿಸರ ಮತ್ತು ಜೀವಿ ಶಾಸ್ತ್ರ ಸಚಿವರು).

ಅ) ವಿವರ		ರೂ.ಲಕ್ಷಗಳಲ್ಲಿ
1.	ಆದಾಯ:	
1.	ರಬ್ಬರ್ ಮಾರಾಟ	5693.75
2.	ನಿಂತ ರಬ್ಬರ್ ಮರಗಳ ಮಾರಾಟ	666.66
3.	ದಂಡ ಟೆಂಡರ್‌ಗಳ ಮಾರಾಟ ಸ್ಕ್ರೀಪ್ ಮಾರಾಟ ಇತರೆ ಅನುಪಯುಕ್ತ ವಸ್ತುಗಳ ಮಾರಾಟ ಬಾಡಿಗೆ ಇತ್ಯಾದಿಗಳಿಂದ ಆದಾಯ	88.73
4.	ಹಳೆಯ ವಾಹನದ ಮಾರಾಟ	2.98
	ಒಟ್ಟು	6452.12

2) ಖರ್ಚು

1.	ತೋಟಗಳ ನಿರ್ವಹಣೆ, ಮೂರ್ತೆದಾರರ ಕೂಲಿ ಕಾರ್ಮಿಕರ ಕಲ್ಯಾಣ ವೆಚ್ಚಗಳು ಇತ್ಯಾದಿ.	624.85
2.	ತಯಾರಿಕಾ ವೆಚ್ಚಗಳಾದ ಸಂಸ್ಕರಣೆ, ದುರಸ್ಥಿ (ಕೆ.ಇ.ಬಿ.(ಶಕ್ತಿ) ಡ್ರಮ್ಮುಗಳು ಹಾಗೂ ಮೆಷಿನರಿಗಳ ದುರಸ್ಥಿ ನಿರ್ವಹಣೆ ಇತ್ಯಾದಿಗಳು.	583.63
3.	ಸಿಬ್ಬಂದಿಗಳ ಸಂಬಳ, ಬೋನಸ್ಸು, ಭವಿಷ್ಯ ನಿಧಿ, ಕಛೇರಿ ಬಾಡಿಗೆ, ನೀರಿನ, ವಿದ್ಯುಚ್ಚಕ್ತಿ ವಾಹನ ನಿರ್ವಹಣಾ ವೆಚ್ಚ, ಸರಬರಾಜು, ಅಂಚೆ ದೂರವಾಣಿ ಆಸ್ಪತ್ರೆ ಕಟ್ಟಡಗಳ ದುರಸ್ಥಿ ನಿರ್ವಹಣೆ ಇವೇ ಮುಂತಾದ ವೆಚ್ಚಗಳು.	3876.35
	ಒಟ್ಟು	5084.83
4.	ಮರು ನಾಟಿಗೆ ಯೋಜನೆಯ ವೆಚ್ಚಗಳು ಮೂರ್ತೆಗೆ ಬಾರದೆ ಇರುವ ರಬ್ಬರ್ ತೋಟಗಳ ನಿರ್ವಹಣೆ ರಸ್ತೆ ಹಾಗೂ ಸೇತುವೆಗಳ ನಿರ್ವಹಣೆ ಹೊಸ ವಾಹನ ಖರೀದಿ, ಪ್ರಯೋಗ ಶಾಲೆಯ ವೆಚ್ಚಗಳು ಇತ್ಯಾದಿ ವೆಚ್ಚಗಳು.	714.95

ಪುತ್ತೂರು ತಾಲ್ಲೂಕಿನ ಜಾನುವಾರು ಸಂವರ್ಧನಾ ಕೇಂದ್ರದ ಬಗ್ಗೆ

1665 (2313) ಶ್ರೀ ಅಂಗಾರ ಎಸ್ (ಸೂಳ್ಯ): ಮಾನ್ಯ ಪಶುಸಂಗೋಪನಾ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ಸೂಳ್ಯ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಒಳಗೆ ಬರುವ ಪುತ್ತೂರು ತಾಲ್ಲೂಕಿನ ಕ್ಯೊಲಾ ಜಾನುವಾರು ಸಂವರ್ಧನಾ ಕೇಂದ್ರದಲ್ಲಿ ಯಾವ ಯಾವ ಕಾರ್ಯಕ್ರಮ ಅನುಷ್ಠಾನ ಮಾಡಲಾಗಿದೆ ಪ್ರತಿ ಕಾರ್ಯಕ್ರಮಕ್ಕೆ ತಗಲುವ ಖರ್ಚು ಬರುವ ಆದಾಯವೆಷ್ಟು?

ಶ್ರೀ ಎ.ಕೃಷ್ಣಪ್ಪ (ಪಶುಸಂಗೋಪನಾ ಮತ್ತು ಸಕ್ಕರೆ ಸಚಿವರು).

ಅಭಿವೃದ್ಧಿ ಕಾರ್ಯ ಕ್ರಮಗಳ ಅನುಷ್ಠಾನ	ಖರ್ಚು (99-2000) ಲಕ್ಷ ರೂ.ಗಳಲ್ಲಿ	ಆದಾಯ (99-2000) ಲಕ್ಷ.ರೂ.ಗಳಲ್ಲಿ
1) ಹಂದಿ ತಳಿ ಅಭಿವೃದ್ಧಿ	3.25	0.51
2) ಮಿಶ್ರ ತಳಿ ಹಸುಗಳ ಅಭಿವೃದ್ಧಿ	8.27	5.05
3) ಗಿರಿರಾಜ ಕೋಳಿ ಮರಿ ಸಾಕಣೆ	0.70	0.72
4) ಮೇವು ಅಭಿವೃದ್ಧಿ	2.60	0.30
ಒಟ್ಟು	14.82	6.58